ಜಿಲ್ಲಾ ವಕ್ಫ್ ಸಮಿತಿಗಳ ರಚನೆ

657(23); ಶ್ರೀ ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ರಾಜ್ಯದಲ್ಲಿ ಎಷ್ಟು ಜಿಲ್ಲಾ ವಕ್ಫ್ ಸಮಿತಿಗಳಿವೆ; ವಿವರಗಳನ್ನು ನೀಡುವುದು;

ಆ) ಜಿಲ್ಲಾ ವಕ್ಫ್ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗೆ ಇರುವ ಮಾನದಂಡಗಳೇನು;

ಇ) 2012–13ನೇ ಮೇಯಿಂದ ಇದುವರೆಗೆ ಎಷ್ಟು ಜಿಲ್ಲಾ ವಕ್ಫ್ ಸಮಿತಿಗಳಿವೆ ಹೊಸ ಅಧ್ಯಕ್ಷರು ಮತ್ತು ಸದಸ್ಯರುಗಳನ್ನ ನೇಮಿಸಲಾಗಿದೆ;

ಈ) ತುಮಕೂರು ಜಿಲ್ಲಾ ವಕ್ಫ್ ಸಮಿತಿಗೆ ನೂತನ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;

ಉ) ಹೊಸ ಸಮಿತಿ ಯಾವಾಗ ರಚನೆಯಾಗುವುದು;

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ತಲಾ ಒಂದರಂತೆ ಒಟ್ಟು 30 ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಿವೆ.

ಆ) ಕರ್ನಾಟಕ ರಾಜ್ಯ ವಕ್ಫ್ ರೆಗ್ಯುಲೇಷನ್ ಆಕ್ಟ್, 2010 ರ ಸೆಕ್ಷನ್ (15) ರಡಿಯಲ್ಲಿ ಜಿಲ್ಲಾ ವಕ್ಫ್ ಸಲಹಾ ಸಮಿತಿಯನ್ನು ರಚಿಸಲಾಗುತ್ತಿದ್ದು, ಸದಸ್ಯರು ಮತ್ತು ಅಧ್ಯಕ್ಷರ ನೇಮಕಾತಿಗೆ ಯಾವುದೇ ಮಾನದಂಡಗಳು ಇರುವುದಿಲ್ಲ.

ಇ) 2012–13ನೇ ಸಾಲಿನಿಂದ ಇದುವರೆಗೆ 6 ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಲ್ಲಿ ಆಡಳಿತಾಧಿಕಾರಿಗಳನ್ನು, 22 ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಲ್ಲಿ ಅಧ್ಯಕ್ಷರುಗಳನ್ನು, 23 ಉಪಾಧ್ಯಕ್ಷರುಗಳನ್ನು ಮತ್ತು ಮಂಡ್ಯ, ಮೈಸೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾ ವಕ್ಫ್ ಸಲಹಾ ಸಮಿತಿಗಳಿಗೆ ಸದಸ್ಯರುಗಳನ್ನು ನೇಮಿಸಲಾಗಿದೆ.

ಈ) ತುಮಕೂರು ಜಿಲ್ಲಾ ವಕ್ಫ್ ಸಲಹಾ ಸಮಿತಿಗೆ ದಿನಾಂಕ: 28.06.2014 ರಂದು ನೂತನ ಅಧ್ಯಕ್ಷರ ನಾಮನಿರ್ದೇಶನ ಮಾಡಲಾಗಿದೆ.

ಉ) ಜಿಲ್ಲಾ ವಕ್ಫ್ ಸಲಹಾ ಸಮಿತಿಯನ್ನು ರಚಿಸಲು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ತುಮಕೂರಿನ ಹಜರತ್ ಮದರ್ ಷಾ ಸಮಿತಿಯ ರಚನೆ

658(24); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ತುಮಕೂರು ನಗರದ ಹಜರತ್ ಮದಾರ್ ಷಾ ಸಮಿತಿಗೆ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಾಮನಿರ್ದೇಶನ ಮಾಡಲು ಮಾನದಂಡಗಳೇನು;

ಆ) ಈ ಹಿಂದೆ ಇದ್ದ ಸಮಿತಿಯ ಅವಧಿ ಯಾವಾಗ ಅಂತ್ಯವಾಯಿತು;

ಇ) ಅವಧಿ ಮುಗಿದ ನಂತರವು ಈ ಸಮಿತಿಯನ್ನು ವಿಸ್ತರಿಸಲು ಕಾರಣಗಳೇನು;

ಈ) ಹೊಸ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಾಮನಿರ್ದೇಶನ ಮಾಡಲು ತಡವಾಗಿರುವುದಕ್ಕೆ ಕಾರಣಗಳೇನು;

ಉ) ಹೊಸ ಸಮಿತಿ ಯಾವಾಗ ರಚನೆಯಾಗುವುದು;